ಜಿನಚಂದ್ರ ಮುನಿಯನ್ನು ಪೂರ್ವಾಭಿಮುಖವಾಗಿ ಪೀಠದ ಮೇಲೆ ಕೂರಿಸಿದರು. ಹೋಮಕುಂಡದ ವಿಭೂತಿಯನ್ನು ತೆಗೆದುಕೊಂಡು ಮುನಿಯ ತಲೆ ಮತ್ತು ಮುಖಕ್ಕೆ ಚೆನ್ನಾಗಿ ತಿಕ್ಕಿದರು. ಅನಂತರ ಜಿನಚಂದ್ರರು ತಮ್ಮ ಮುಷ್ಟಿಯಲ್ಲಿ ತಲೆಗೂಡಲನ್ನು ಹಿಡಿದು ಕೊಂಡು ಕರ್ಮದ ಕಳೆಯನ್ನು ಕೀಳುವಂತೆ ಕಿತ್ತು ಹಾಕಿದರು. ಗಡ್ಡಮೀಸೆ ಯನ್ನು ನಗುನಗುತ್ತ ಕಿತ್ತು ಹಾಕಿದರು ಭಕ್ತಾದಿಗಳೆಲ್ಲ ಗುಂಪಾಗಿ ಅಳಿದುಳಿದ ಕೂಡಲನ್ನು ಜೋಪಾನವಾಗಿ ಕಿತ್ತರು. ಈ ಸಂದರ್ಭದಲ್ಲಿ ಅತ್ತಿಮಬ್ಬೆ ಮತ್ತು ಅವಳ ಸೋದರಿ ಗುಂಡುಮಬ್ಬೆಯರ ಉತ್ಸಾಹ ಹೇಳತೀರದು. ಪೀಠವನ್ನಡರಿ ಇವರಿಬ್ಬರೂ ತಮಗೆಟುಕಿದ ಮುನಿಯ ತಲೆಗೂದಲನ್ನು ಭಕ್ತಿಯಿಂದ ಎಚ್ಚರಿಕೆಯಿಂದ ಕೀಳಲು ಉಪಕ್ರಮಿಸಿದರು. ಒಮ್ಮೊಮ್ಮೆ ಮುನಿಯ ತೊಡೆಯನ್ನೇರಿ ಕೈಗೆಟುಕದ ಕೂದಲನ್ನೂ ಎಟುಕಿಸಿಕೊಂಡರು ! ನಾಗಮಯ್ಯ ಮಕ್ಕಳಿಬ್ಬರನ್ನೂ ತಡೆದು ಮುನಿಗಳನ್ನು ತುಳಿಯಬಾರದೆಂದು ಗದರಿಸಿ ನಮಸ್ಕರಿಸುವಂತೆ ಹೇಳಿ ಅಡ್ಡಬೀಳಿಸಿದನು. ಸಮ್ಯಕ್ತ್ವ ಚೂಡಾಮಣಿಗಳಾಗುವಂತೆ ಅವರಿಬ್ಬರನ್ನೂ ಮುನಿಗಳು ಹರಸಿದರು. ಜಿನಬಿಂಬದ ಮೇಲಿದ್ದ ಕಳೆದ ದಿನದ ಹೂವನ್ನು ಬಾಚಿತೆಗೆಯುವಂತೆ ಜಿನಭಕ್ತರು ಮುನಿಯ ತಲೆಗೂದಲನ್ನು ತೆಗೆದರು. ಉಳಿದವರೂ ಮಕ್ಕಳ ಉತ್ಸಾಹವನ್ನು ಕಂಡು ತಾವೂ ಒಂದೊಂದು ಕೈ ಹಾಕಿದರು. ಮಹಾಮುನಿಯಾದ ಜಿನಚಂದ್ರರು ಮಾತ್ರ ನಿರ್ಲಿಪ್ತರಾಗಿ ಶಿಲ್ಪಿಯ ಕೈಗೆ ಸಿಕ್ಕಿದ ಬಿಂಬದಂತೆ ಕುಳಿತರು. ಭಕ್ತಾದಿಗಳು ಸೇರಿಕೊಂಡು ಮುನಿಯ ತಲೆಯನ್ನೂ, ಮುಖವನ್ನೂ ಒಂದು ಕೂದಲಿಲ್ಲದಂತೆ ಮಾಡಿದರು. ಲೋಚು ಮುಗಿದ ಮೇಲೆ ಜಿನಗಂಧೋದಕವನ್ನು ಮುನಿಯ ತಲೆಗೆಲ್ಲ ಸವರಿದರು. ಸಂಜೀವಿನಿಯ ಸ್ಪರ್ಶವನ್ನು ಪಡೆದಂತೆ ಮಹರ್ಷಿ ಹಿಗ್ಗಿಹೋದರು ! ಮೈಮೇಲೆ ಚೆಲ್ಲಿದ್ದ ಕುರುಳನ್ನೆಲ್ಲ ಪಿಂಚದಿಂದ ಮೃದುವಾಗಿ ಜಾಡಿಸಿಕೊಂಡರು.

ಪುಂಗನೂರಿನಲ್ಲಿ ಜಿನಚಂದ್ರರ ಲೋಚು ಸಮಾರಂಭ ವೈಬವವಾಗಿ ನಡೆಯಿತು. ಚಾಲುಕ್ಯರ ಮಹಾಮಂತ್ರಿಯಾದ ನಾಗಮಯ್ಯ ಈ ಕಾರ್ಯಕ್ಕೆ ಮುಂದಾಳಾಗಿ ನಿಂತಾಗ ಕೇಳಬೇಕೆ? ನಗಮಯ್ಯನ ಮಕ್ಕಳಾದ ಮಲ್ಲಪ ಹಾಗೂ ಪುನ್ನಮಯ್ಯ ಇಬ್ಬರೂ ಆ ದಿನ ರಾಜಕಾರ್ಯವನ್ನೆಲ್ಲ ತೊರೆದು,

ಮಕ್ಕಳು ಮರಿಗಳ ಸಮೇತ ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಜಿನಚಂದ್ರರು ಈ ಮನೆತನಕ್ಕೆ ಕುಲಗುರುಗಳು. ಐಶ್ವರ್ಯದ ನಟ್ಟನಡುವೆ ಮುಳುಗಿದ್ದ ನಾಗಮಯ್ಯ ಎಂದೂ ದಾರಿತಪ್ಪದಂತೆ ಈ ಮಹರ್ಷಿ ಕಾವಲಾಗಿದ್ದರು. ಪರಾಕ್ರಮಿಗಳಾದ ಮಲ್ಲಪಯ್ಯ ಹಾಗೂ ಪುನ್ನಮಯ್ಯ ಸೊಕ್ಕದಂತೆ ಜಿನಚಂದ್ರ ಮುನಿಗಳು ಒಂದು ಕಣ್ಣಿಟ್ಟಿದ್ದರು. ಈ ಮಹರ್ಷಿಯ ಹರಕೆ ಪಡೆಯದೆ ನಾಗಮಯ್ಯನಾಗಲಿ ಅವನ ಮಕ್ಕಳು ಮೊಮ್ಮಕ್ಕಳಾಗಲಿ ಯಾವ ಕಾರ್ಯಕ್ಕೂ ಕೈಹಾಕಿದವರಲ್ಲ.

ಅಂದು ಜಿನಚಂದ್ರರು ಉಪವಾಸವನ್ನಾಚರಿಸಿದರು. ಈ ಸಮಾರಂಭಕ್ಕಾಗಿ ಪರಸ್ಥಳದಿಂದ ಆಗಮಿಸಿದ್ದ ಭಕ್ತಾದಿಗಳಿಗೆಲ್ಲ ನಾಗಮಯ್ಯ ಸಂತರ್ಪಣೆ ಮಾಡಿಸಿದನು. ಊಟೋಪಚಾರ ಮುಗಿದ ನಂತರ ಪ್ರಮುಖರೆಲ್ಲ ಜಿನಚಂದ್ರರ ದರ್ಶನಕ್ಕಾಗಮಿಸಿದರು. ಜಿನಚಂದ್ರರ ಜೊತೆಯಲ್ಲಿ ಕುರುಳ್ಗಳ ಸವಣನಾದ ಪೊನ್ನನೂ ಕುಳಿತಿದ್ದನು. ಆ ವೇಳೆಗೆ ಪಂಪಕವಿ ಆಗಮಿಸಿ, ಮಹಾಮುನಿಗೆ ಅಡ್ಡಬಿದ್ದನು. ಧರ್ಮವೃದ್ಧಿರಸ್ತು ಎಂದು ಅವರು ಹರಸಿದರು. ನಾಗಮಯ್ಯ ಮಕ್ಕಳುಮರಿಗಳ ಸಹಿತ ಇಲ್ಲಿಗೆ ಬಂದು ಮುನಿಗಳ ದರ್ಶನಮಾಡಿದನು. ಅನಂತರ ತನ್ನ ಸಂಸಾರದ ಪರಿವಾರವನ್ನೆಲ್ಲ ಪಂಪ ಕವಿಗೆ ಪರಿಚಯ ಮಾಡಿಕೊಟ್ಟನು.

"ಪಂಪದೇವ, ಈಚೆಗೆ ತಾವು ಜಡಭರತರಾಗಿರುವಿರಲ್ಲ !" ಪಂಪ ಖಿನ್ನನಾಗಿ ನುಡಿದನು.

"ನಾನು ಹೇಳಿದ್ದೂ ಅದೇ ಅರ್ಥದಲ್ಲಿ. ಪೂರ್ಣ ಜ್ಞಾನಿಯಾದಾಗ ಮೌನವೇ ಮಕುಟ ವಾಗುವುದು. ತಾವು ಈಚೆಗೆ ಏನೂ ಬರೆಯುತ್ತಿಲ್ಲ. ಪಾದರಸದಂತಿದ್ದ ತಾವು ತಾಮಸರಾಗುತ್ತಿರುವಿರಿ !" ಎಂದು ಮುನಿಗಳು ಪಂಪನನ್ನು ಆಕ್ಷೇಪಿಸಿದರು.

"ಅರಿಕೇಸರಿ ಮಹಾಪ್ರಭುಗಳು ಕಣ್ಮುಚ್ಚಿದ ಮೇಲೆ ನನಗೊಂದೂ ಬೇಡವಾಗಿದೆ ಸ್ವಾಮಿ," ಪಂಪ ಗದ್ಗದನಾದನು.

"ಅರಿಕೇಸರಿ ಭೂಮಿತೂಕದ ವ್ಯಕ್ತಿ. ಅವರು ಸತ್ತುದು ನಿಜವಾಗು ಲೋಕದ ದೌರ್ಭಾಗ್ಯ. ಆದರೆ ನಾವು ಇರುವ ತನಕ ಉಸಿರಾಡುತ್ತಿರಬೇಕಲ್ಲ !"

"ಸೂರ್ಯ ಮುಳುಗಿದ ಮೇಲೆ ಕಮಲ ಅರಳೀತೆ? ನನ್ನ ಸ್ಫೂರ್ತಿಯ ಮೂರ್ತಿ ಅರಿಕೇಸರಿ! ನನ್ನ ಉತ್ಸಾಹದ ಉಗಮ ಅರಿಕೇಸರಿ ! ನನ್ನ ಉಲ್ಲಾಸದ ಉಯ್ಯಾಲೆ ಅರಿಕೇಸರಿ ! ಅಂಥ

ಮಹಾಪುರುಷ ಕಣ್‌ಮರೆಯಾದ ಮೇಲೆ ನಾನು ಬದುಕಿರುವುದೂ ವ್ಯರ್ಥ. ಯಾರಿಗೋಸುಗ ಬದುಕಲಿ ?" ಎಂದು ಪಂಪ ಅನಾಸಕ್ತನಾಗಿ ನುಡಿದನು.

"ಪಂಪ, ಒಬ್ಬ ವ್ಯಕ್ತಿಗಾಗಿ ಲೋಕವ್ಯಾಪಾರ ನಿಲ್ಲಬಾರದಪ್ಪ. ಈ ಲೋಕ ಒಂದು ಪ್ರವಾಸ. ಬರುವವರು ಬರುತ್ತಾರೆ. ಹೋಗುವವರು ಹೋಗುತ್ತಾರೆ. ಕೆಲದಿನ ಜೊತೆ ಯಾಗುವೆವು. ಅನಿವಾರ್ಯವಾಗಿ ಅಗಲಲೇಬೇಕು. ಆದಿಪುರಾಣವನ್ನು ಬರೆದ ಮಹಾಕವಿ ನೀನು! ನಿನ್ನಂಥವನೇ ನಿರಾಶನಾಗಿ ಕೈಕಟ್ಟಿ ಕುಳುತುಕೊಂಡಾಗ ಲೋಕವನ್ನು ಎಚ್ಚರಿಸುವರಾರು ? ಆರ್ತಧ್ಯಾನದಿಂದ ನಿನಗೆ ಹಿತವಾದೀತೇ? "

"ಮಹಾಸ್ವಾಮೀ, ಹಿಂದೆಲ್ಲ ನಾನೂ ಇದೇ ರೀತಿ ಬೋಧಿಸುತ್ತಿದ್ದೆನು. ಈಗಲಾದರೊ ವಿರಹತಾಪದಿಂದ ತತ್ತರಿಸಿರುವೆನು. ಅರಿಕೇಸರಿ ಕೊಟ್ಟಿರುವ ವಸ್ತು ವಾಹನಗಳನ್ನು ಓರಣವಾಗಿ ಜೋಡಿಸಿ ಕಣ್‌ತುಂಬ ನೋಡಿದರೆ ಚಣಕಾಲ ನೋವನ್ನು ಮರೆಯುವೆ. ಮರುಕ್ಷಣದಲ್ಲೇ ಇಲ್ಲಿ ಅರಿಕೇಸರಿ ಇಲ್ಲವಲ್ಲ ಎಂದು ಒಂದೊಂದು ಪದಾರ್ಥವೂ ನನ್ನನ್ನು ಮೂದಲಿಸಿದಂತಾಗುವುದು. ಅರಿಕೇಸರಿ ನನಗಿತ್ತ ನವರತ್ನಗಳನ್ನು ಅವಲೋಕಿಸುವಾಗ ಅವೂ ನನ್ನಂತೆ ಕಂಬನಿ ಸೂಸುವುದನ್ನು ಕಣ್ಣಾರೆ ಕಂಡಿರುವೆನು ! ಅರಿಕೇಸರಿ ಇಲ್ಲದ ಲೋಕ ಸ್ವರ್ಗವಾದರೂ ನನ್ನ ಪಾಲಿಗೆ ನರಕ ವಿದ್ದಂತೆಯೇ !" ಎಂದು ಮಹಾಕವಿ ಕಂಬನಿಮಿಡಿದನು. ಭಾವಾವೇಶವನ್ನು ಹಿಡಿತದಲ್ಲಿಟ್ಟುಕೊಳ್ಳಲಾರದೆ ತತ್ತರಿಸಿದನು.

"ಪಂಪ ಅಳುತ್ತಾ ಕುಳಿತರೆ ನಿನ್ನ ಕಣ್‌ಕೆಡುವುದೇ ಹೊರತು ಅರಿಕೇಸರಿ ಬಂದಾನೆ? ಮನೋದೌರ್ಬಲ್ಯವನ್ನು ಕಿತ್ತೊಗೆದು ಆತ್ಮಚಿಂತನೆ ಮಾಡಿದರೆ ನಿನಗೂ ಹಿತ ಲೋಕಕ್ಕೂ ಹಿತ. ನೋಡು. ಶಾಂತಿಪುರಾಣವನ್ನು ಕೇಳಬೇಕೆಂಬ ಬಯಕೆ ದಿನದಿನಕ್ಕೂ ನನಗೆ ಹೆಚ್ಚುತ್ತಿದೆ. ನಿನ್ನ ಆದಿಪುರಾಣ ಮಹೋನ್ನತ ಕೃತಿ ! ನಿನ್ನ ಭಾರತ, ನಮ್ಮ ಭರತಖಂಡದಷ್ಟೇ ಬೆಲೆಯಾದ ಗ್ರಂಥ ! ಶಾಂತಿಪುರಾಣವನ್ನೂ ನೀನೇ ರಚಿಸಿ, ನನ್ನ ಹಂಬಲವನ್ನು ತೀರಿಸಬಾರದೆ ?" ಎಂದು ಜಿನಚಂದ್ರರು ಕಾರ್ಯೋನ್ಮುಖನಾಗಲೆಂದು ಪಂಪನನ್ನು ಪ್ರಚೋದಿಸಲು ಯತ್ನಿಸಿದರು.

“ನಾನು ಮತ್ತೆ ಬರೆಯುವುದು ! ಛೆ ಎಂಥ ಅಪಚಾರ ! ಅರಿಕೇಸರಿ ಸತ್ತಾಗಲೇ ನನ್ನ ‘ಕಂಠ’ ವನ್ನೂ ಅವನೊಡನೆ ಚಿತೆಯೇರಿಸಿಬಿಟ್ಟೆನು ! ವಿಧವೆಗೆ ಮಕ್ಕಳಾದಾವೆ ಸ್ವಾಮಿ? ಆದರೂ ಅವಕ್ಕೆ ಮನ್ನಣೆ ಬಂದೀತೆ?” ಎನ್ನುತ್ತ ಪಂಪ ಸುರಿವ ಕಂಬನಿಯನ್ನು ಉತ್ತರೀಯದಿಂದ ಒರೆಸಿಕೊಳ್ಳಲು ಹೋದಾಗ ಏಳೆಂಟು ವರ್ಷದ ಅತ್ತಿಮಬ್ಬೆ ಆದೃಶ್ಯವನ್ನು ಕಂಡು ಪಕ್ಕನೆ ಅವನ ಬಳಿ ಸುಳಿದು “ಮಾಮ, ಏಕಳುವೆ? ಏನು ಬೇಕಾಗಿತ್ತು? ಏನಾದರೂ ಕಳೆದು ಹೋಗಿದೆಯೆ ?” ಎಂದು ಪ್ರಶ್ನಿಸುತ್ತ ಅವನ ಕಂಬನಿಯನ್ನು ಒರೆಸಿದಳು. ಇನ್ನೊಂದು ಕಡೆ ಗುಂಡುಮಬ್ಬೆ ಧಾವಿಸಿ. “ಮಾಮ, ನಮ್ಮ ಮನೆಯಲ್ಲಿ ಅತ್ತವರನ್ನೇ ಕಾಣೆ ಮಾಮ! ನಿನಗೇನಾಗಿದೆ ಮಾಮ ?” ಎಂದು ಪಂಪನ ಕೈ ಹಿಡಿದು ಕರುಣೆಯಿಂದ ಪ್ರಶ್ನಿಸಿದಳು. ಇಬ್ಬರನ್ನೂ ಬಾಚಿ ತಬ್ಬಿಕೊಂಡು ಪಂಪಕವಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಮುದ್ದಾಡಿದನು. ಮಕ್ಕಳೂ ಯಾವುದೇ ಅನಿರ್ವಚನೀಯವಾದ ಭಾವವೇಶಕ್ಕೆ ಸಿಕ್ಕಿ ಕಂಬನಿ ಮಿಡಿದವು. ಪಂಪಕವಿ ಅವರಿಬ್ಬರ ಕಣ್ಣನ್ನೂ ಒರೆಸಿ, “ಇನ್ನು ನಾನು ಅಳುವುದಿಲ್ಲ ತಾಯಿ !” ಎಂದು ಗದ್ಗದನಾಗಿ ನುಡಿದನು. “ಮಾಮ, ನಿನಗೆ ಏನು ಬೇಕು ?” ಅತ್ತಿಮಬ್ಬೆ ಮತ್ತೆ ಪ್ರಶ್ನಿಸಿದಳು.

“ನಾನು ಕಳೆದುಕೊಂಡಿರುವುದನ್ನು ಯಾರೂ ಹುಡುಕಿ ಕೊಡಲಾರರು ತಾಯಿ” ಎಂದು ಪಂಪ ಖಿನ್ನನಾದನು.

“ನಾನು ಹುಡುಕಿಕೊಡುವೆನು” ಅತ್ತಿಮಬ್ಬೆ ಇನ್ನೂ ಭರವಸೆಯಾಗಿ ನುಡಿದಳು.

“ಹೇಳಿ ಮಾಮ, ಏನು ಕಳೆದುಹೋಯಿತು?” ಎಂದು ಮಕ್ಕಳಿಬ್ಬರೂ ಕೇಳಿದರು.

“ನಮ್ಮ ಮಹಾರಾಜ ಸತ್ತು ಹೋದರಮ್ಮ ! ಅವರನ್ನು ಕರೆದುಕೊಂಡು ಬರುವಿರೇನು?” ಪಂಪ ಅಸಾಧ್ಯವಾದ ತನ್ನ ಕೋರಿಕೆಯನ್ನು ಅವರ ಮುಂದಿಟ್ಟನು.

“ನಿಮ್ಮ ಮಹಾರಾಜ ಸತ್ತು ಹೋದರೆ ? ನಮ್ಮ ಮಹಾರಾಜ ಬದುಕಿರುವರು !ಅವರನ್ನು ಕರೆದುತರಲೇನು?” ಅತ್ತಿ ಮಬ್ಬೆ ಸಮಸ್ಯೆನ್ನು ಪರಿಹರಿಸಿದವಳಂತೆ ಹಿಗ್ಗಿದಳು.

“ ಹೋಗಲಿ ನಮ್ಮ ಮನೆಯಲ್ಲೇ ಇದ್ದುಬಿಡಿ ಮಾಮ” ಗುಂಡುಮಬ್ಬೆ ಮಾರ್ಗದರ್ಶನ ಮಾಡಿದಳು.

ಇವರಿಬ್ಬರ ಮಾತನ್ನು ಕೇಳಿ ಪಂಪನಿಗೆ ಎಷ್ಟೋ ಸಮಾಧಾನವಾಯಿತು. ಅರಿ ಕೇಸರಿಯಂತೆ ಉದಾರಿಗಳು ಕನ್ನಡನಾಡಿನಲ್ಲಿ ಇನ್ನೂ ಇರುವರೆಂಬುದನ್ನು ಮನ ಗಂಡು ತುಸು ಹಿಗ್ಗಿದನು.

"ಪಂಪದೇವ, ಮಕ್ಕಳನ್ನು ನೋಡಿದಿರಾ? ಯಾವ ತಾಪತ್ರಯಕ್ಕೂ ಸಿಗದೆ ಇವರು ಹಾಯಾಗಿರುವರು. ಲೋಕದ ಭಾರವನ್ನೆಲ್ಲ ಹೊತ್ತವರಂತೆ ನಾವೂ ನೀವೂ ಪರದಾಡುತ್ತಿರುವೆವು. ಮಕ್ಕಳಂಥ ಮನಸ್ಸುಳ್ಳವರೇ ನಿಜವಾದ ಜ್ಞಾನಿಗಳು ! ನಾನು ಹೇಳಿದಂತೆ ಪುರಾಣ ರಚನೆಗೆ ಕೈಹಾಕಿಬಿಡಿ. ನಿಮ್ಮ ಸಂಕಟವೆಲ್ಲ ಅಲ್ಲಿ ರಸವಗಿಬಿಡುವುದು" ಎಂದು ಜಿನಚಂದ್ರರು ಪಂಪನಲ್ಲಿ ಉತ್ಸಾಹ ತುಂಬಲು ಪ್ರಯತ್ನಿಸಿದರು.

"ಗ್ರಂಥರಚನೆ ! ನನ್ನ ಕೈಲಾಗದ ಮಾತು ಸ್ವಾಮಿ. ಈ ಜನ್ಮದಲ್ಲಿ ಮತ್ತೆ ಬರೆಯುವುದಿಲ್ಲವೆಂದು ಶಪಥ ಮಾಡಿರುವೆನು. ಶಾಂತಿಪುರಾಣದ ರಚನೆಯಾಗಬೇಕು ತಾನೆ ?"

"ಹೌದು ಮಹಾರಾಯ."

"ಅದೆಷ್ಟರ ಕೆಲಸ. ತಮ್ಮ ಬಳಿಯೇ ಕುಳಿತಿರುವರಲ್ಲ ಪೊನ್ನಕವಿ. ರಾಮಾಯಣವನ್ನು ಬರೆದು ಕೃತಕೃತ್ಯರಾದ ಈ ಕವಿಚಕ್ರವರ್ತಿ ಮನಸ್ಸು ಮಾಡಿದರೆ ಶಾಂತಿಪುರಾಣ ರಚನೆ ಒಂದು ದೊಡ್ಡ ಮಾತೇ?" ಎಂದು ಪಂಪ ಕವಿ ಪೊನ್ನನ ಕಡೆ ತಿರುಗಿ ಮುಗುಳ್ನಕ್ಕನು.

"ನನ್ನ ಮಾತಂತಿರಲಿ. ತಾವು ಶಾಂತಿಪುರಾಣವನ್ನು ರಚಿಸಿ" ಎಂದು ಪೊನ್ನಕವಿ ಬೆಸಗೊಂಡನು.

" ಹಾಗಲ್ಲ ಸ್ವಾಮಿ. ನಾನು ಎರಡು ಕೃತಿಗಳನ್ನು ರಚಿಸಿರುವೆನು. ಒಂದು ಲೌಕಿಕ, ಇನ್ನೊಂದು ಪಾರಮಾರ್ಥಿಕ. ತಾವೂ ನನ್ನಂತೆ ಪುರಾಣ ಕವಿಗಳಾಗಬೇಕು. ತಮ್ಮ ರಾಮಾಯಣ ಲೌಕಿಕವಾಯಿತು. ಈಗ ಶಾಂತಿಪುರಾಣವನ್ನು ರಚಿಸಿದರೆ ಅದು ಪಾರ ಮಾರ್ಥಿಕವಾಗುವುದು" ಎಂದು ಪಂಪ ಜಾರಿಕೊಳ್ಳಲು ಯತ್ನಿಸಿದನು.

"ಪೊನ್ನ ಸ್ವಾಮಿಯೂ ಬರೆಯಲಿ; ತಾವೂ ಬರೆಯಿರಿ" ಎಂದು ಅತ್ತಿಮಬ್ಬೆ ಬಾಯಿ ಹಾಕಿದಳು.

“ನನಗೂ ಅಕ್ಕನಿಗೂ ಒಂದೊಂದು ಪುಸ್ತಕವಾಗುವುದು ಇಬ್ಬರೂ ಬರೆದುಬಿಡಿ” ಗುಂಡುಮಬ್ಬೆ ಚಿಗುರೆಯಂತೆ ಕುಣಿದಾಡಿದಳು. ಅಲ್ಲಿದವರೆಲ್ಲ ಈ ಸನ್ನಿವೇಶವನ್ನು ಕಂಡು ಹಿರಿಹಿಗ್ಗಿದರು.

ಪಂಪಕವಿ ಮಕ್ಕಳನ್ನು ತೊಡೆಯಮೇಲೆ ಕೂರಿಸಿಕೊಂಡು ಮತ್ತೊಮ್ಮೆ ಮುದ್ದಾಡಿದನು. “ನಿಮ್ಮಿಬ್ಬರನ್ನೂ ನಮ್ಮೂರಿಗೆ ಕರೆದುಕೊಂಡು ಹೋಗುವೆನು. ಬರುವಿರಿ ತಾನೆ” ಎಂದು ಪಂಪ ಪ್ರಶ್ನಿಸಿದನು.

“ಅಲ್ಲಿಗೇಕೆ ಮಾವ? ನಿಮ್ಮ ರಾಜರು ಸತ್ತುಹೋಗಿರುವರಲ್ಲ ! ಎಲ್ಲಿ ರಾಜರಿದ್ದರೋ ಅಲ್ಲಿದ್ದುಬಿಡೋಣ” ಎಂದು ಅತ್ತಿಮಬ್ಬೆ ತೀರ್ಮಾನ ಹೇಳಿದಳು.

“ನಮ್ಮೂರು ತುಂಬಾ ಸೊಗಸಾಗಿದೆ ತಾಯಿ” ಎಂದು ಪಂಪ ಮನಃಪೂರ್ವಕ ನುಡಿದನು.

“ಹಾಗಿದ್ದರೆ ಇಲ್ಲೇ ಇದ್ದುಬಿಡಿ ಮಾವ” ಅತ್ತಿಮಬ್ಬೆ ಬಲವಂತ ಮಾಡಿದಳು.

“ನಿಮ್ಮತ್ತೆಯನ್ನೂ ಕರೆದುತರಬೇಕಲ್ಲ” ಪಂಪ ನಗೆಯಾಡಿದನು.

“ ಅವರನ್ನೂ ಕರೆದು ತಂದುಬಿಡಿ” ಗುಂಡುಮಬ್ಬೆ ಹಿಗ್ಗಿನಿಂದ ನುಡಿದಳು.

“ಮಾವ ಹೋದರೆ ಮತ್ತೆ ಬರುವುದಿಲ್ಲ ಕಣೆ” ಅತ್ತಿಮಬ್ಬೆ ಸಂದೇಹ ಪಟ್ಟಳು.

“ಹೌದು ಮಗು, ನೀವು ಹೇಳುವ ಮಾತು ನಿಜ” ಎಂದು ಜಿನಚಂದ್ರರು ನಗೆಯಾಡಿದರು.

“ಹೇಗಿದ್ದರೂ ಪಂಪಕವಿ ಬಂದಿರುವರು. ರಾತ್ರಿ ಪುರಾಣ ಪ್ರವಚನ ನಡೆಯಲಿ. ಕವಿಯ ಬಾಯಿಂದಲೇ ಆದಿಪುರಾಣವನ್ನು ಕೇಳುವ ಭಾಗ್ಯ ಮನೆಯ ಬಾಗಿಲಿಗೇ ಬಂದಿರುವಾಗ ಬಿಟ್ಟವರುಂಟೆ !” ಎಂದು ನಾಗಮಯ್ಯ ಪಂಪನನ್ನು ಅಲ್ಲೇ ನಿಲ್ಲಿಸಿ ಕೊಳ್ಳುವ ಯೋಜನೆ ಹಾಕಿದನು.

“ಶಿವರಾತ್ರಿಯಂದು ಪ್ರಥಮ ತೀರ್ಥೇಶಚರಿತೆ ! ಅದೂ ಮಹಾಕವಿಯ ದುಂದುಭಿ ನಿನಾದ ! ಪರಮಾನಂದ ಪರಮಾನಂದ !” ಎಂದು ಜಿನಚಂದ್ರಮುನಿ ಪುಲಕಿತರಾದರು.

“ಮಾಮ ಕಥೆ ಹೇಳುವರು ಕಣೆ!” ಎಂದು ಅತ್ತಿಮಬ್ಬೆ ತನ್ನ ತಂಗಿಯ ಬೆನ್ನನ್ನು ಚಪ್ಪರಿಸಿದಳು.

“ಈ ಹೊತ್ತಿನಿಂದ ನಮಗೆಲ್ಲ ಪಂಪಮಾವ ಓಜ ಕಣೆ !” ಎಂದು ಗುಂಡುಮಬ್ಬೆ ಕುಣಿದಾಡಿದಳು.

ನಾಗಮಯ್ಯನ ಸಂಸಾರ ದೊಡ್ಡದು. ಸಾಹಸಿಯಾದ ಮಲ್ಲಪ ಚತುರನಾದ ಪುನ್ನಮಯ್ಯ ಇವರಿಬ್ಬರೂ ಈತನ ಮಕ್ಕಳು. ಮುತ್ತೈದೆ ಸಾವನ್ನು ಕೋರಿದ ಈತನ ಹೆಂಡತಿಗೆ ದೇವರು ಆ ಭಾಗ್ಯವನ್ನು ಎಂದೋ ಕರುಣಿಸಿದ್ದನು. ಪುನ್ನಮಯ್ಯನಿಗೆ ಮಕ್ಕಳಾಗದಿದ್ದರೂ ಮಲ್ಲಪನಿಗೆ ಸಾಕುಸಾಕೆನ್ನುವಷ್ಟು ಮಕ್ಕಳಾದವು. ನಾಗಮಯ್ಯ ತನ್ನ ಸೋದರ ಸೊಸೆ ಅಬ್ಬಕಬ್ಬೆಯನ್ನು ಮಲ್ಲಪನಿಗೆ ತಂದುಕೊಂಡಿದ್ದನು. ಗುಂಡುಮಯ್ಯ. ಎಳಮಯ್ಯ. ಚಿಕ್ಕಪೊನ್ನಮಯ್ಯ, ಆಹವಮಲ್ಲ, ವಲ್ಲ ಈ ರೀತಿ ಐದುಜನ ಗಂಡುಮಕ್ಕಳನ್ನು ಅಬ್ಬಕಬ್ಬೆ ಹಡೆದಳು. ಆರನೆ ಹೆರಿಗೆಯಾಗುವಾಗ ಈಕೆ ಅವಳಿ ಜವಳಿ ಹೆಣ್ಣುಮಕ್ಕಳನ್ನು ಹೆತ್ತಳು. ದೊಡ್ಡವಳಿಗೆ ಅತ್ತಿಮಬ್ಬೆಯೆಂದೂ ಚಿಕ್ಕವಳಿಗೆ ಗುಂಡು ಮಬ್ಬೆಯೆಂದೂ ಹೆಸರಿಟ್ಟರು. ಅಬ್ಬಕಬ್ಬೆಯ ಎಂಟನೆ ಮಗುವೂ ಹೆಣ್ಣು ಕೂಸು. ಅದಕ್ಕೆ ನಾಗಿಯಬ್ಬೆಯೆಂದು ಹೆಸರಿಟ್ಟರು. ಅಬ್ಬಕಬ್ಬೆಯ ಎಂಟನೆ ಮಗವೂ ಹೆಣ್ಣು ಕೂಸು. ಅದಕ್ಕೆ ನಾಗಿಯಬ್ಬೆಯೆಂದು ಹೆಸರಿಟ್ಟರು. ಜಿನಚಂದ್ರ ಮುನಿಗಳು ನಾಗಮಯ್ಯನ ಓರಿಗೆಯವರು. ಬಾಲ್ಯದಿಂದಲೂ ಇಬ್ಬರೂ ಸಂಗಾತಿಗಳು. ನಾಗಮಯ್ಯ ರಾಜಕೀಯಕ್ಕಿಳಿದಾಗಲೇ ಜಿನಚಂದ್ರರು ವಿರಾಗಿಗಳಾಗಿ ಯತಿಯಾದರು. ನಾಗಮಯ್ಯ ರಾಜಕೀಯಕ್ಕಿಳಿದಾಗಲೇ ಜಿನಚಂದ್ರರು ವಿರಾಗಿಗಳಾಗಿ ಯತಿಯಾದರು. ನಾಗಮಯ್ಯ ಲೌಕಿಕದಲ್ಲಿ ಸೈ ಎನಿಸಿಕೊಂಡರೆ ಇತ್ತ ಜಿನಚಂದ್ರರು ಪಾರಮಾರ್ಥಿಕದಲ್ಲಿ ಸೈ ಎನಿಸಿಕೊಂಡರು.

ನಾಗಮಯ್ಯನ ಹಿರಿಯರೆಲ್ಲ ವೇದ ವೇದಾಂಗ ಪಾರಂಗತರಾದ ಕೌಂಡಿನ್ಯ ಗೋತ್ರದ ಬ್ರಾಹ್ಮಣರು. ನಾಗಮಯ್ಯನಿಗೂ ವೈದಿಕ ವಿದ್ಯೆ ಕರತಲಾಮಲಕವಾಗಿತ್ತು. ಜಿನಚಂದ್ರಮುನಿಗಳ ಪ್ರಭಾವಕ್ಕೊಳಗಾಗಿ ಯಜ್ಞ ಯಾಗಾದಿಗಳನ್ನು ತೊರೆದು ನಾಗಮಯ್ಯ ಜೈನನಾದನು. ದೇವೇಂದ್ರ ಮುನಿಗಳು ಅತ್ತ ಪಂಪನ ತಂದೆಯಾದ ಭೀಮಪ್ಪಯ್ಯನನ್ನು ಜೈನನನ್ನಾಗಿ ಮಾಡಿದರು. ಅದೇ ಕಲಕ್ಕೆ ಜಿನಚಂದ್ರರು ನಾಗಮಯ್ಯನ ಮೇಲೆ ಅಹಿಂಸೆಯ ಬಲೆ ಬೀಸಿ ಮನವೊಲಿಸಿ ಈತನಿಗೆ ಜೈನದೀಕ್ಷೆ ಕೊಟ್ಟರು. ಅಂದಿನಿಂದ ನಗಮಯ್ಯನ ನಂಟರು ಇಷ್ಟರು ಒಬ್ಬರಾದ ಮೇಲೊಬ್ಬರಂತೆ ಜಿನಧರ್ಮಕ್ಕೆ

ಶರಣಾಗುತ್ತ ಬಂದರು. ವೆಂಗಿ ವಿಷಯದ ಕಮ್ಮೆನಾಡು ಅಹಿಂಸಾಧರ್ಮ ದಾಗರವಾಯಿತು ! ಯಜ್ಞ ಕುಂಡಗಳೆಲ್ಲ ದಯಾವೃಕ್ಷಕ್ಕೆ ಕುಂಡಗಳಾದವು. ಯಜ್ಞ ಕಂಡಗಳೆಲ್ಲ ಅಹಿಂಸಾ ಧ್ವಜಸ್ತಂಭಗಳಾದವು !

ನಾಗಮಯ್ಯ ಚಾಲುಕ್ಯರ ಮಹಾ ಮಂತ್ರಿಯಾಗಿದ್ದನು. ಪಂಪ ಚಾಲುಕ್ಯರ ಇನ್ನೊಂದು ಶಾಖೆಯಲ್ಲಿ ಆಶ್ರಯ ಪಡೆದಿದ್ದನು. ಪೊನ್ನಕವಿ ಸವಣನಾದರೂ ರಾಷ್ಟ್ರ ಕೂಟರ ಆಸ್ಥಾನ ಕವಿಯಾಗಿ ಪ್ರಖ್ಯಾತಿಗೆ ಬಂದಿದ್ದನು. ಆಗಾಗ ಈ ಮಹಾಪುರುಷರೆಲ್ಲ ಜೈನಸಮಾರಂಭಗಳಲ್ಲಿ ಒಂದೆಡೆ ಕಲೆಯುತ್ತಿದ್ದರು. ಅಂದಿನ ಸನ್ಯಾಸಿಗಳು ರಾಜಕೀಯದ ರಾಜಸ ಪಾರಾವಾರದಲ್ಲಿ ಧಾರ್ಮಿಕ ಮಂದರವನ್ನಿಳುಹಿ ಕನ್ನಡ ಸಂಸ್ಕೃತಿಯೆಂಬ ನವನೀತವನ್ನು ತೆಗೆಯುತ್ತಿದ್ದರು ! ಅಂದಿನ ರಾಜಮಹಾರಾಜರು ಅಹಿಂಸಾ ಧರ್ಮಕ್ಕೆ ತಲೆಬಾಗಿದ್ದರು ! ಅಂದಿನ ಮಂತ್ರಿ ಮುಖ್ಯರು ದಯಾವೃಕ್ಷದ ಪೋಷಕರಾಗಿದ್ದರು.

ಉನ್ನತಾಸನದಲ್ಲಿ ಜಿನಚಂದ್ರ ಮುನಿ ಮಂಡಿಸಿರುವರು. ಅವರ ಪಕ್ಕದಲ್ಲಿ ಕುರುಳ್ಗಳ ಸವಣನಾದ ಪೊನ್ನಕವಿ ಅಸನಾರೂಢನಾಗಿದ್ದನು. ವೇದಿಕೆಯ ಮೇಲೆ ಪಂಪ ಕವಿ ತನ್ನ ಆದಿಪುರಾಣವನ್ನು ತೆರೆದು ಓದಲು ಕುಳಿತಿದ್ದನು. ಓಲೆಗಳ ಮೇಲೆ ಮುದ್ದಾದ ಅಕ್ಷರ. ಸಹಸ್ರಾರು ಓಲೆಗಳನ್ನು ಒಂದುಗೂಡಿಸಿ ಅತ್ತ ಇತ್ತ ಗಂಧದ ಹಲಗೆಯನ್ನು ಸೇರಿಸಿತ್ತು. ಗಂಧದ ಹಲಗೆಯ ಸುತ್ತ ಚಿನ್ನದ ಚೌಕಟ್ಟು. ಕನಕದಲ್ಲಿ ಕಂಪು. ಕಂಪಿನಲ್ಲಿ ಧರ್ಮದ ಪೆಂಪು ಒಂದಾದಂತೆ ಆದಿಪುರಾಣದ ಓಲೆಯ ಕಟ್ಟು ಕಂಗೊಳಿಸುತ್ತಿತ್ತು ! ಕದಳೀಗರ್ಭಶ್ಯಾಮನಾದ ಪಂಪನ ರೂಪು ಆಕರ್ಷಣೀಯವಾದುದು. ಎತ್ತರವೂ ಅಲ್ಲ ಕುಳ್ಳೂ ಅಲ್ಲದ ಭವ್ಯಾಕಾರ, ಕಣ್ಣಿಗೆ ಹಿತವಾದ ರೂಪು. ಅರಳಿದ ಪೊಂದಾವರೆಯಂಥ ಮುಖಮಂಡಳ, ನಿಲೋತ್ಪಲವಾಗಿ ಕಂಗೊಳಿಸುವ ಬೊಗಸೆಗಂಗಳು, ಪೆರೆನೊಸಲು, ಗುಂಗುರು ಗೂದಲು, ಗರುಡಿಯಲ್ಲಿ ಜೇವೊಡೆದ ದೇಹ; ಒಟ್ಟಿನಲ್ಲಿ ಕನ್ನಡದ ನವಮನ್ಮಥಾಕಾರ! ತುಸು ವಯಸ್ಸಾಗಿದ್ದರೂ ಮೈ ಹೊಳಪು ಮಾಸಿಲ್ಲ. ಪಂಪದೇವ ಇಬ್ಬರು ಮಹರ್ಷಿಗಳ ನಟ್ಟ ನಡುವೆ ರಸ ಸೇತುವೆಯಾಗಿ ವಿರಾಜಮಾನನಾಗಿರುವನು. ಜಿನಚಂದ್ರರು ಕರ್ಮಗಳನ್ನು ಕ್ಷಯಿಸಿರುವರು. ಅವರ ತಲೆ ಅವರ ಮುಖವೆಲ್ಲ ಬೋಳಾಗಿ ಕರ್ಮವೆಲ್ಲ ಸೋರಿರುವಂತೆ ಭಾಸವಾದರೆ ಇನ್ನೊಂದು ಕಡೆ ಜಟಾಧಾರಿಯಾಗಿ ಕುಳಿತಿರುವ ಪೊನ್ನಕವಿ ಕರ್ಮಗಳಿದ್ದರೂ

ನನ್ನನ್ನೇನೂ ಮಾಡಲಾರವೆಂದು ಅದನ್ನು ಸ್ತಬ್ಧಗೊಳಿಸುರುವಂತೆ ಕುರುಳ್ಗಳ ಸವಣನಾಗಿ ರಾರಾಜಿಸುತ್ತಿರುವನು ! ಇವರಿಬ್ಬರ ನಡುವೆ ಸಂಸಾರ ಸಾರೋದಯನಾಗಿ ಪಂಪ ಮಹಾಕವಿ ವಿರಾಜಮಾನ ನಾಗಿದ್ದನು.

ನಾಗಮಯ್ಯನ ಮನೆಯ ಅಂಗಳದಲ್ಲಿ ಅಂದಿನ ಸಂಜೆ ಊರಿನ ಶ್ರಾವಕರೆಲ್ಲ ಕಿಕ್ಕಿರಿದರು. ಕೈಸಾಲೆಯಲ್ಲಿ ಮಾಟದ ಸಮವಸರಣ ಜೋಡಣೆಯಾಗಿತ್ತು. ಸುವರ್ಣದ ಸಮವಸರಣ, ಮುತ್ತುರತ್ನದ ತೋರಣ, ಬೆಳ್ಳಿಯ ಮಾನಸ್ತಂಭ, ಸ್ಫಟಿಕದ ರತ್ನ  ಪೀಠತ್ರಯ, ಪೀಠವಡರಿ ದಿಕ್ಕಿಗೊಂದರಂತೆ ಕುಳಿತು ಕೇಸರ ಜಟಾಜಾಲವನ್ನು ಹರಡಿದ್ದ ಮಾಟದ ಸಿಂಹಗಳು, ಸಿಂಹಗಳ ಬೆನ್ನಿಗಾತುಕೊಂಡು ವಿಕಸಿತವಾದ ಕೆಂದಾವರೆ, ಕೆಂದಾವರೆಯ ಮೇಲೆ ಅಂಟಿಯೂ ಅಂಟದಂತೆ ವಿರಾಜಮಾನವಾದ ಪೀತಶಿಲಾ ಜಿನಬಿಂಬ ! ಜಿನಬಿಂಬದ ಹಿಂಬದಿಯಲ್ಲಿ ತುಪ್ಪದ ದೀಪ ಪ್ರಜ್ವಲಿಸುವುದು. ಅದರಿಂದಾಗಿ ಪೀತ ಶಿಲೆಯಿಂದ ಹೊಂಬಣ್ಣದ ಬೆಳಕು ಹೊರಚಿಮ್ಮುವುದು ! ಶ್ರಾವಕರು ನಿಜವಾದ ಸಮವಸರಣವನ್ನು ಕಂಡವರಂತೆ ಬೆಕ್ಕಸ ಬೆರಗಾಗಿ ನೋಡುವರು. ನಾಗಮಯ್ಯನ ದೈವಭಕ್ತಿ ಗರಿಗೆದರಿ ಆಗಾಗ ಇಂಥ ಭವ್ಯದೃಶ್ಯಗಳನ್ನು ವಿರಚಿಸುತ್ತಿತ್ತು ! ನಾಗಮಯ್ಯನು ಇತ್ತೀಚೆಗಂತೂ ರಾಜಕೀಯವನ್ನು ಸಂಪೂರ್ಣವಾಗಿ ಮಕ್ಕಳಲ್ಲಿ ಹಂಚಿ ತಾನು ಧಾರ್ಮಿಕ ಚಿಂತನೆಯಲ್ಲೆ ಮುಳುಗಿ ಹೋಗಿರುವನು. ಇವನನ್ನು ಮಾತನಾಡಿಸಲು ಮನೆಯಲ್ಲಿ ಎಲ್ಲರಿಗೂ ಸ್ವಲ್ಪ ಭಯವೆ. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಧೈರ್ಯವಾಗಿ ಬಂದು ಅಜ್ಜನ ಕೊರಳಿಗೆ ಆತುಕೊಂಡು ಚೆಲ್ಲಾಟವಾಡುವರು. ಅಜ್ಜನ ಯೋಗಕ್ಷೇಮವನ್ನೆಲ್ಲ ಈ ಹಸುಳೆಗಳಿಗೇ ಮನೆಯವರು ವಹಿಸಿಬಿಟ್ಟಿದ್ದರು. ನಾಗಮಯ್ಯನ ಆಧ್ಯಾತ್ಮಿಕ ಪ್ರಭಾವ ಈ ಕೂಸುಗಳಿಬ್ಬರ ಮೇಲೂ ಅಪೂರ್ವ ಪ್ರಭಾವವನ್ನುಂಟುಮಾಡಿತ್ತು. ಬೇಸರವಾದಾಗ ಈ ಮಕ್ಕಳಿಬ್ಬರೂ ಕಲೆತು ತಮಗೆ ತಾವೇ ಸಮವಸರಣವನ್ನು ಜೋಡಿಸಿ ಬಿಡುತ್ತಿದ್ದರು; ಇಂದ್ರಾಯಣಿಯರಂತೆ ಜಿನಬಿಂಬವನ್ನು ಎತ್ತಿ ಮುದ್ದಾಡುತ್ತಿದ್ದರು! ಇಂದು ಇವರ ಉತ್ಸಾಹಕ್ಕೆ ಕುಡಿಯಿಟ್ಟಂತಾಗಿದೆ.

ಸಮವಸರಣದ ಒಂದು ಪಕ್ಕದಲ್ಲಿ ಜಿನಚಂದ್ರರೂ ಪೊನ್ನನೂ ಇವರಿಬ್ಬರ ನಡುವೆ ಪಂಪಕವಿಯೂ ಕುಳಿತಿರುವನು. ಇನ್ನೊಂದು ಪಕ್ಕದಲ್ಲಿ ನಾಗಮಯ್ಯನೂ ಒಬ್ಬಿಬ್ಬ ಪ್ರಮೂಖರೂ

ಮಂಡಿಸಿರುವರು. ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ಅಂದು ನರ್ತಕಿಯರಾಗಿ ವೇದಿಕೆಯ ಮೇಲೆ ಕಾಣಿಸಿಕೊಂಡರು.

ಅತ್ತಿಮಬ್ಬೆ ದೇವೇಂದ್ರನ ವೇಷ ಹಾಕಿರುವಳು. ಗುಂಡುಮಬ್ಬೆ ಇಂದ್ರಾಣಿಯ ಉಡುಪಿನಲ್ಲಿರುವಳು. ಆದಿದೇವನ ಗರ್ಭಾವತರಣ ಕಲ್ಯಾಣವನ್ನು ಇವರಿಬ್ಬರೂ ಅಭಿವ್ಯಕ್ತಿಗೊಳಿಸಿದಾಗ ಬಂಜೆ ಬೆಸಲೆಯಾದಂತೆ ಎಲ್ಲರೂ ಹಿಗ್ಗಿದರು. ನಿಷ್ಕಳಂಕ ಮನಸ್ಸಿನ ಮಕ್ಕಳಾಟ ಯಾವುದಾದರೂ ಅದು ಚಂದವೇ! ಮಲ್ಲಿಗೆಯಮಾಟದಂತೆ ಚೆಲುವು ಇವರಿಬ್ಬರದು. ಒಂದಕ್ಕೊಂದು ಹೊಂದಿಕೊಂಡು ಅನುರೂಪವಾದ ಅಂಗಸೌಷ್ಟವ. ಮುಕ್ತಿದ್ವಾರದಂತೆ ಅಹಿಂಸೆಯ ಕಳೆಯಿಂದ ರಾರಾಜಿಸುವ ಮುದ್ದುಮೊಗ, ದಯಾಮುಕ್ತಿದ್ವಾರದಂತೆ ಅಹಿಂಸೆಯ ಕಳೆಯಿಂದ ರಾರಾಜಿಸುವ ಮುದ್ದುಮೊಗ, ದಯಾದಾಕ್ಷಿಣ್ಯವೇ ಸಾಕಾರಗೊಂಡಂಥ ಬೊಗಸೆಗಂಗಳು! ಸೃಷ್ಟಿರಹಸ್ಯವನ್ನು ಭೇದಿಸುವಂತೆ ಮೊನಚಾದ  ಮೂಗು. ಕುಸುಮಕೋಮಲೆಯರಾದರೂ ವ್ರತನಿಯಮಗಳಲ್ಲಿ ಕಟ್ಟು ನಿಟ್ಟಾದವರು ಎಂಬುದನ್ನು ಸಾರುವಂತೆ ಇರುವ ಗದ್ದ, ತುಂಬುಗೆನ್ನೆಗಳು, ಬಳ್ಳಿಯಂತೆ ಬಳುಕುವ ದೇಹ ಇಂಥ ರೂಪಸಂಪನ್ನೆಯರಾದ ಈ ಹಸುಳೆಗಳು ನರ್ತನಕ್ಕೆ ನಿಂತಾಗ ಕೇಳಬೇಕೆ? ಇವರು ಹೇಗೆ ನಿಂತರೂ ನೋಡಲು ಎರಡು ಕಣ್ಣು ಸಾಲದು !

ಮೊದಲು ಗರ್ಭಾವತರಣವನ್ನು ಅಭಿನಯಿಸಿದರು. ತೀರ್ಥಂಕರ ಪುರಿಯಲ್ಲಿ ರತ್ನವೃಷ್ಟಿಯಾದುದನ್ನು ಇವರು ಅಭಿನಯಿಸುವಾಗಂತು ಅಂಗಳದಲ್ಲೆಲ್ಲ ನಾಗಮಯ್ಯ ರತ್ನವೃಷ್ಟಿಯನ್ನೆ ಮಾಡಿಸಿಬಿಟ್ಟನು ! ಮಕ್ಕಳ ಮೋಹಕ ರೂಪದಲ್ಲಿ ತಲ್ಲೀನರಾಗಿದ್ದ ಶ್ರಾವಕರು ರತ್ನವನ್ನು ಕಟ್ಟಿಕೊಂಡು ಏನು ಮಾಡಿಯಾರು? ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರು ತಮ್ಮ ಬೊಗಸೆಯಲ್ಲಿದ್ದ ಮುತ್ತುರತ್ನಗಳನ್ನು ಕೈಸಾಲೆಯಲ್ಲಿ ಎರಚಿದರು. ಅಡಿಯಿಂದ ಮುಡಿತನಕ ಮುತ್ತುರತ್ನಗಳಿಂದ ಸಿಂಗರಗೊಂಡಿದ್ದ ಈ ಬಾಲೆಯರು ಹೂಬಿಟ್ಟ ಕಲ್ಪಲತೆಗಳಂತೆ ಕಂಗೊಳಿಸಿದರು ! ಇವರಿಬ್ಬರೂ ರತ್ನವೃಷ್ಟಿ ಮಾಡಿದರಾದರೂ ಕೈಸಾಲೆಯಲ್ಲಿ ಕುಳಿತವರಲ್ಲಿ ಅವು ಯಾರಿಗೆ ತಾನೆ ಬೇಕು ? ಸಮವ ಸರಣದ ಉದ್ದಗಲದಲ್ಲೂ ಸಂತೃಪ್ತಿ ಹರಡಿರುವಂತೆ ನಾಗಮಯ್ಯನ ಈ ಸಮಾರಂಭದಲ್ಲೂ ಸಂತೃಪ್ತಿ ತುಂಬಿಹೋಗಿತ್ತು !

ಜನ್ಮಾಭಿಷೇಕ ಕಲ್ಯಾಣವನ್ನು ಅಭಿನಯಿಸುವಾಗಲಂತೂ ಪ್ರೇಕ್ಷಕರ ಕಣ್ಣು ಆನಂದಾಶ್ರುವಿನಿಂದ ತುಂಬಿಹೋಯಿತು. ದೇವೇಂದ್ರನಂತೆ ಅತ್ತಿಮಬ್ಬೆ ಹೊರಗಡೆಯೇ ನಿಂತು ಇಂದ್ರಾಣಿಯಾದ ಗುಂಡುಮಬ್ಬೆಯನ್ನು ಒಳಗೆ ಕಳಿಸಿದಳು. ಒಳಗೆ ಹೋದ ಗುಂಡುಮಬ್ಬೆ ಜಿನಶಿಶುವನ್ನು ತರಬೇಕು. ಅಲ್ಲಿದ್ದ ಜನನಿಗೆ ಮಾಯಾನಿದ್ರೆಯನ್ನು ಬರಿಸಿ ಕೃತಕ ಶಿಶುವನ್ನು ತಾಯಿಯ ಪಕ್ಕದಲ್ಲಿ ಮಲಗಿಸಿ ಜಿನಶಿಶುವನ್ನು ಹಾರಿಸಿ ಕೊಂಡು ಬರುವ ದೃಶ್ಯ ರೊಮಾಂಚನಕಾರಿಯಾದುದು! ಗುಂಡುಮಬ್ಬೆ ಜೋಪಾನವಾಗಿ ಈ ಮಹತ್ಕಾರ್ಯವನ್ನು ಸಾಧಿಸಿಕೊಂಡು ಬಂದಳು. ಪರಮಾತ್ಮ ಸಂದರ್ಶನಕ್ಕೆ ದಾಹಗೊಂಡಿದ್ದ ದೇವೇಂದ್ರ, ಇಂದ್ರಾಣಿ ತಂದೆ ಜಿನಶಿಶುವನ್ನು ಬಾಚಿ, ತಾಯಂದಿರೂ ನಾಚುವಂತೆ ಎದೆಗವುಚಿಕೊಂಡನು !ಹೆಂಗರುಳಾಗಿ ಮುದ್ದಾಡಿದನು. ಅನಂತರ ಐರಾವತದಲ್ಲಿ ಈ ಮಗುವನ್ನು ಕೊಂಡೊಯ್ಯುವಂತೆ ನಟಿಸಿದರು. ಮೇರುಪರ್ವತದಲ್ಲಿ ಪಾಂಡುಕ ಶಿಲೆಯ ಮೇಲೆ ಜಿನಶಿಶುವನ್ನು ಕೂರಿಸುವಂತೆ ಅಭಿನಯಿಸಿದರು. ಕ್ಷೀರಸಾಗರವನ್ನೇ ತಂದು ಜಿನಮೂರ್ತಿಗೆ ಮಹಾಮಸ್ತಕಾಭಿಷೇಕವೆಸಗುವಂತೆ ಈ ಬಾಲೆಯರು ಅಭಿನಯಿಸುವಾಗ ನಿಜವಾಗು ಜಿನಾಭಿಷೇಕವನ್ನೇ ಮಾಡಿಬಿಟ್ಟರು ! ಭವ್ಯಾವಳಿ ಲೋಕವನ್ನೇ ಮರೆತು ಈ ಮೋಹಕ ದೃಶ್ಯದಲ್ಲಿ ತನ್ಮಯರಾದರು ! ಈ ಮಕ್ಕಳು ಪಂಚಕಲ್ಯಾಣಗಳನ್ನೂ ಕಣ್ಣಿಗೆ ಕಟ್ಟುವಂತೆ ಅಭಿವ್ಯಕ್ತಿಗೊಳಿಸಿ ರಸದ ಹೊನಲನ್ನು ಹರಿಸಿದರು !

ಪಂಪಮಹಾಕವಿ ಈ ಮಹಾದೃಶ್ಯವನ್ನು ಕಂಡು ಪುಳಕಿತನಾದನು. ಅತ್ತಿಮಬ್ಬೆ ಹಾಗೂ ಗುಂಡುಮಬ್ಬೆಯರು ಇವನ ಕಣ್ಣಿಗೆ ಕಾವ್ಯಕನ್ನೇಯರಾಗಿ ಕಂಗೊಳಿಸಿದರು ! ಜಿನಚಂದ್ರರು ಭಕ್ತಿಯಿಂದ ಉದ್ದೀಪನೆ ಪಡೆದರು. ಪೊನ್ನಕವಿ ರಸಾವೇಶಗೊಂಡನು. ನಾಗಮಯ್ಯ ಪ್ರಾರಂಭದಿಂದ ಕೊನೆಯತನಕ ಕಂಬನಿ ಹರಿಸುತ್ತಿದ್ದನು. ನರ್ತನ ಮುಗಿದ ಕೂಡಲೆ ಇವನು ಮಕ್ಕಳನ್ನು ವೇಷ ತೊರೆಯುವುದಕ್ಕೂ ಬಿಡದೆ ಬಾಚಿ ತೊಡೆಯ ಮೇಲೆ ಕೂರಿಸಿಕೊಂಡನು. ಹೆಂಗಸರ ಗುಂಪಿನಲ್ಲಿ ಮುಂದಣ ಸಾಲಿನಲ್ಲಿ ಕುಳಿತಿದ್ದ ಅಬ್ಬಕಬ್ಬೆ ಆನಂದದ ಪಾಲ್ಗಡಲಲ್ಲಿ ತೇಲುತ್ತಿದ್ದಳು ! ಚಾಳುಕ್ಯರ ಮಹಾಮಂತ್ರಿ ದಲ್ಲಪ. ನಾಗಮಯ್ಯನ ಪಕ್ಕದಲ್ಲೇ ಕುಳಿತಿದ್ದನು. ಈ ಮಕ್ಕಳಾಟವನ್ನು ಕಣ್‌ತುಂಬ ನೋಡಿದನು. ನಾಗಮಯ್ಯನ ತೊಡೆಯಮೇಲಿದ್ದ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆಯರನ್ನು ಮುದ್ದಿಸಿ

ತನ್ನ ತೊಡೆಯಮೇಲೆ ಕೂರಿಸಿಕೊಂಡನು. ತನ್ನ ಕೈಗೆ ಸಿಕ್ಕಿದ ಈ ನಿಧಿ–ನಿಕ್ಷೇಪವನ್ನು ಇನ್ನೆಂದೂ ಬಿಡಲಾರೆನೆಂಬಂತೆ ಮಕ್ಕಳಿಬ್ಬರನ್ನೂ ದಲ್ಲಪ ಬಿಗಿಯಾಗಿ ಹಿಡಿದಿದ್ದನು.

ಪಂಪಕವಿಯ ಕಾವ್ಯವಾಚನ ಕೇಳಲು ಶ್ರಾವಕರೆಲ್ಲ ಆತುರಗೊಂಡಿದ್ದರು. ಪಂಪ ಕವಿ ಓಲೆಯಕಟ್ಟನ್ನು ಓರಣವಾಗಿ ಮುಂದಿಟ್ಟುಕೊಂಡಿದ್ದನು. ಅರಿಕೇಸರಿ ಪಂಪನ ಕೃತಿಗಳನ್ನು ಗಂಧದ ಹಾಗೂ ಚಿನ್ನದ ಹಾಳೆಗಳಲ್ಲಿ ಬರೆಸಿದ್ದನು. ಪಂಪನಿಗೂ ಅವನ ಕೃತಿಗಳ ಸುವರ್ಣ ಸಂಪುಟವನ್ನು ಬಹುಮಾನವಾಗಿ ಕೊಟ್ಟಿದ್ದನು. ಪ್ರಥಮ ತಿರ್ಥೇಶನ ಬಾಳ್ವೆಯನ್ನೆಲ್ಲ ಪಂಪಕವಿ ಮಹಾಕಾವ್ಯವಾಗುವಂತೆ ಬಣ್ಣಿಸಿದರೆ ಅತ್ತ ಅರಿಕೇಸರಿ ಆ ಮಹಾಕಾವ್ಯವನ್ನು ಸುವರ್ಣ ಸಂಪುಟವಾಗುವಂತೆ ಬಂಗಾರದ ಹಾಳೆಗಳಲ್ಲಿ ಬರೆಸಿ ಬೆಡಗುಮಾಡಿದನು ! ಪಂಪಕವಿಯ ಸುವರ್ಣ ಸಂಪುಟಕ್ಕೆ ಬೆಳ್ಳಿಯ ಚೌಕಟ್ಟು, ಚೌಕಟ್ಟಿಗೆ ನಾನಾ ರತ್ನದ ಅಂಚುಕಟ್ಟಿ ಸೊಗಸುಮಾಡಿತ್ತು. ಪಂಪಕವಿ ಆದಿಪುರಾಣವನ್ನು ತೆಗೆದು ಮಂಗಳ ಮಾಡಿದನು. ಪಂಚಪರಮೇಷ್ಠಿಗಳನ್ನು ಭಕ್ತಿಯಿಂದ ಕೊಂಡಾಡಿದನು. ದುಂದುಭಿನಿನಾದವಾದಂತೆ ಪಂಪನ ವಾಗ್ಝರಿ ದುಮ್ಮಿಕ್ಕಿತು !

ಆದಿದೇವನ ದಿವ್ಯಚರಿತೆ ! ಆದರಲ್ಲೂ ರಚಿಸಿದ ಮಹಾಕವಿ ತಾನೇ ಎದುರುಬುಂದು ಸಂದರ್ಭಕ್ಕನುಗುಣವಾಗಿ ಹಾಡುವಾಗ ಶ್ರಾವಕರ ಭಾಗ್ಯದ ಬಾಗಿಲು ತೆರೆದಂತಾಗದೆ?

“ಜಯವರ್ಮ ತನ್ನ ತಂದೆಗೆ ಹಿರಿಯ ಮಗನಾದರೂ ತಂದೆ ಸಾಯುವ ಮುನ್ನ ಕಿರಿಯ ಮಗನಿಗೆ ಪಟ್ಟಕಟ್ಟಿ ಕಣ್‌ಮುಚ್ಚಿದನು. ಜಯವರ್ಮನ ಸಂಕಟ ಹೇಳತೀರದು. ಊರು ಬೇಡವಾಯಿತು. ಕಾನನ ಕೈಬೀಸಿ ಕರೆಯಿತು. ಜಯವರ್ಮ ಜಿನಮುನಿಯಾಗಿ ತನ್ನ ಕೈಯ್ಯಾರೆ ಕಿತ್ತ ತಲೆಗೂದಲನ್ನು ಪಂಚನಮಸ್ಕಾರ ಜಪಿಸುತ್ತಾ ಹುತ್ತದಲ್ಲಿ ಹಾಕುವಾಗ ಇವನಿಗೆ ಹಾವು ಕಚ್ಚಿತು ! ಈ ವೇಳೆಗೆ ಸರಿಯಾಗಿ ಖೇಚರವಿಮಾನ ಪಕ್ಕನೆ ಅಂಬರದಲ್ಲಿ ಹಾರಾಡುತ್ತ ಜಯವರ್ಮಮುನಿಯ ಗಮನವನ್ನು ಸೆಳೆಯಿತು. ಒಂದು ಕಡೆ ಹಾವಿನ ವಿಷ ಏರುತ್ತಾ ಇದೆ, ಇನ್ನೊಂದು ಕಡೆ ಖೇಚರ ದಂಪತಿಗಳ ಸರಸಲ್ಲಾಪ ಇವನ ಕಿವಿಗೆ ಕೇಳುತ್ತಾ ಇದೆ. ಅವರಿಬ್ಬರ ಮನಮೋಹಕ ರೂಪು ಕಣ್ಣನ್ನು ಕುಕ್ಕು ವಂತಿದೆ !ಜಯವರ್ಮನಿಗೆ ತಾನೂ ಖೇಚರನಾಗಿ ಭೋಗವನ್ನು ಅನುಭವಿಸಬೇಕೆಂಬ ಲಾಲಸೆ ಪಕ್ಕನೆ ಮೊಳೆಯಿತು. ಖೇಚರ ವಿಮಾನದೊಡನೆ ಈತನ ಅಂತರಂಗವೂ ಕನಸುಕಟ್ಟಿಕೊಂಡು

ಹಾರಾಡಿತು ! ಈ ಗುಂಗಿನಲ್ಲಿರುವಾಗಲೇ ಜಯವರ್ಮನ ಪ್ರಾಣಪಕ್ಷಿ ಹಾರಿಹೋಯಿತು!" ಎಂದು ಪಂಪಕವಿ ಬಣ್ಣಿಸಿದಾಗ ಕೇಳುಗರ ಕರುಳು ನುಲಿಚಿದಂತಾಯಿತು. ಜಿನಚಂದ್ರರು ಕರ್ಮದ ಏರಿಲಿತವನ್ನು ಕಂಡವರಂತೆ ಖಿನ್ನರಾದರು. ಅತ್ತಿಮಬ್ಬೆ ಹಾಗೂ ಗುಂಡುಮಬ್ಬೆ ತಮಗರ್ಥವಾಗದಿದ್ದರೂ ಪಂಪನ ಗಂಭೀರ ನಿನಾದದಲ್ಲಿ ತನ್ಮಯರಾಗಿ ಆಲಿಸಿದರು.

ಜಯವರ್ಮ ಸತ್ತು ಮಹಾಬಲಖೇತರನಾದನು. ಏನೇನು ಸಿಗಬೇಕೆಂದು ಕನಸು ಕಟ್ಟಿದ್ದನೋ ಅದೆಲ್ಲ ವ್ರತದ ಮಹಿಮೆಯಿಂದ ಪಡೆದು ಹಿಗ್ಗಿದನು. ಮೊದಲೇ ತೂಗಡಿ ಸುವನಿಗೆ ಹಾಸಿಗೆ ಹಾಸಿಕೊಡುವಂತೆ ಲೌಕಿಕ ಲಂಪಟರಾದ ಮೂವರು ಮಂತ್ರಿಗಳು ಬೇರೆ ಸೇರಿಕೊಂಡು ಮಹಾಬಲನ ಭೋಗಾಕಾಂಕ್ಷೆಗೆ ಪುಳಕವೇಳಿಸಿದರು ! ಆದರೂ ಸ್ವಯಂಬುದ್ಧನೆಂಬ ಪ್ರಧಾನಿ ಆಗಾಗ ಮಹಾಬಲನನ್ನು ಎಚ್ಚರಿಸಿ ಲೌಕಿಕಾಭಿಮುಖವಾದ ಅವನ ಬಾಳ್ವೆಯನ್ನು ಮತ್ತೆ ನೇರ್ಪಡಿಸಿ ಧಾರ್ಮಿಕ ರಂಗದತ್ತ ಎಳೆದನು. ಮಹಾಬಲ ಕೊನೆಗಾಲದಲ್ಲಿ ಸಂಯಮಿಯಾಗಿ ಶುಭ ಪರಿಣಾಮದಲ್ಲಿ ಸಾವನ್ನಪ್ಪಿದನು ! ಎಂದು ಪಂಪ ಮಹಾಕವಿ ಮಹಾಬಲನ ಬಾಳ್ವೆಯಲ್ಲಾದ ಧಾರ್ಮಿಕೋತ್ಕರ್ಷವನ್ನು ಬಣ್ಣಕಟ್ಟಿ ವಿವರಿಸಿದನು. ಇದನ್ನು ಕೇಳಿ ಶ್ರಾವಕರ ಅಂತರಂಗದಲ್ಲಿ ಸಮವಸರಣ ನೆರೆದಂತಾಯಿತು. ಅತ್ತಿಮಬ್ಬೆ ಗುಂಡುಮಬ್ಬೆಯರು ಮಾನಸಿಕವಾಗಿ ಮೇಲೇರಿ ಪಂಪನ ಕಾವ್ಯದ ಕಮನೀಯತೆಯನ್ನು ಸವಿದರು !

ಮಹಾಬಲಖೇಚರ ಸತ್ತು ಹೋದನು. ಈಶಾನಕಲ್ಪದಲ್ಲಿ–ಸಹಸ್ರದಲ ಕಮಲವೊಂದು ತನಗೆ ತಾನೇ ಅರಳಿತು ! ಅದರಿಂದ ಹದಿನಾರರ ಹರಯದ ದೇವನೊಬ್ಬ ಪಕ್ಕನೆ ಮೇಲೆದ್ದನು. ಸುತ್ತಲೂ ಅಚ್ಚರಿಗೊಂಡು ನೋಡುವಾಗ ಅಲ್ಲಿದ್ದ ಹಿರಿಯರು "ಮಹಾಬಲನಾಗಿದ್ದ ನೀನು ಈಗ ದೇವಲೋಕದಲ್ಲಿ ಲಲಿತಾಂಗನಾಗಿ ಬಂದು ಅವತರಿಸಿರುವೆ" ಎಂದು ತಿಳಿಸಿದರು. ಸಹಸ್ರಾರು ಜನ ದೇವನಾರಿಯರ ನಡುವೆ ಲಲಿತಾಂಗನ ರಾಸಲೀಲೆ ನಿತ್ಯವೂ ಹೊಸ ಹೊಸ ರೂಪು ತಾಳಿ ಬಹುಕಾಲ ವಿಜೃಂಭಿಸಿತು! ಸ್ವಯಂಪ್ರಭೆಯೆಂಬ ದೇವಿಗೆ ಲಲಿತಾಂಗ ಮರುಳಾಗಿ ಹೋಗಿದ್ದನು. ಅನಂತಕಾಲ ಅವಳೊಡನೆ ಪ್ರಣಯ ಸಮಾಧಿಯಲ್ಲಿ ತನ್ಮಯನಾದನು. ದೇವಲೋಕವಾದರೂ ಸಾವು ತಪ್ಪುವುದೇ? ಲಲಿತಾಂಗನಿಗೆ ಸಾವಿನ ಸೂಚನೆ ಪಕ್ಕನೆ ಕಾಣಿಸಿಕೊಂಡಿತು. ಸಹಜಾಭರಣ, ಸಹಜ

ಕುಸುಮ ಮಾಲೆಗಳು ಬಾಡಿದವು. ಜೊತೆಗೆ ಈತನ ದೇಹ ಕಾಂತಿಯೂ ಮಸುಕಾಯಿತು ! ಜವನ ಹೆಜ್ಜೆ ಸಪ್ಪುಳ ಕೇಳಿದವನಂತೆ ಲಲಿತಾಂಗ ಬೆದರಿದನು. ಕಲ್ಪವೃಕ್ಷವನ್ನು ಬಾಚಿ ತಬ್ಬಿಕೊಂಡು ಆಯುಸ್ಸನ್ನು ಬೇಡಿದನು; ಕಾಮ ಧೇನುವಿನ ಕಾಲಿಗೆಬಿದ್ದು ಸಾವನ್ನು ತಪ್ಪಿಸುವಂತೆ ಕಾಡಿದನು; ಚೂಡಾಮಣಿಯನ್ನು ಕೊರಳಿಗೆ ಕಟ್ಟಿಕೊಂಡು ಅತ್ತನು. ಕೊನೆಗೆ ತನ್ನ ಪ್ರಿಯತಮೆಯಾದ ಸ್ವಯಂಪ್ರಭೆಯನ್ನು ಮರೆಹೊಕ್ಕನು. ಎಲ್ಲರೂ ಒಂದಾಗಿ ಇವನೊಡನೆ ಗೋಳಾಡಿದರೇ ವಿನಾಯಾರೊಬ್ಬರೂ ಉಳಿಸಲಾರದೆ ಹೋದರು. ಅಲ್ಲಿನ ಹಿರಿಯರು–"ದೇವಲೋಕವೂ ನಶ್ವರವಾದುದೇ. ನಾವೆಲ್ಲ ಸಾಯುವುದಕ್ಕಾಗಿಯೇ ಹುಟ್ಟಿದವರು ! ಇರುವ ಕಾಲವನ್ನು ಗೋಳಾಡಿ ವ್ಯರ್ಥಗೊಳಿಸದೆ ಜಿನೇಂದ್ರ ಪೂಜೆಯಲ್ಲಿ ಕಳೆದುಬಿಡು" ಎಂದು ಸಲಹೆಯಿತ್ತರು. ಆಗ ಲಲಿತಾಂಗ ತಿಳಿಗೊಂಡು ಉಳಿದ ಆರು ತಿಂಗಳ ಆಯುಸ್ಸನ್ನು ಜಿನಬಿಂಬಗಳ ಆರಾಧನೆಯಲ್ಲಿ ಕಳೆದನು. ದೇವನಾರಿಯರೆಲ್ಲ ಪೂಜಾದ್ರವ್ಯವನ್ನು ಅಣಿಮಾಡಿದರು. ಕಲ್ಪವೃಕ್ಷ ಹಣ್ಣು ಹಂಪಲನ್ನು ನೀಡಿತು. ಕಾಮಧೇನು ಜಿನಾಭಿಷೇಕಕ್ಕೆ ಅಮೃತ ಧಾರೆಯನ್ನು ಭೋರ್ಗರೆಯಿತು. ದೀಪ. ಧೂಪ, ಚರುವನ್ನು ಚಿಂತಾಮಣಿ ಒದಗಿಸಿತು. ಜಿನಬಿಂಬದ ಪಾದವನ್ನು ಭದ್ರವಾಗಿ ಹಿಡಿದುಕೊಂಡು ಪಂಚ ನಮಸ್ಕಾರವನ್ನು ಜಪಿಸುವಾಗಲೇ ಲಲಿತಾಂಗ ಪರಂಧಾಮಮನ್ನೈದಿದನು !–ಎಂದು ಮಹಾಕವಿ ವಿರಚಿಸಿದಾಗ ಅಲ್ಲಿದ್ದವರೆಲ್ಲ ಸ್ವರ್ಗದಿಂದ ಚ್ಯುತರಾದವರಂತೆ ತಳಮಳಿಸಿದರು !

ಸ್ವಯಂಪ್ರಭೆಯ ವಿರಹತಾಪವನ್ನು ಪಂಪಕವಿ ಬಣ್ಣಿಸಿದಾಗ ಶ್ರಾವಕರೆಲ್ಲ ಅತ್ತು ಬಿಟ್ಟರು. ಎಲ್ಲರ ಕಣ್ಣಲ್ಲೂ ನೀರೂರುವುದನ್ನು ಕಂಡು ಅತ್ತಿಮಬ್ಬೆ ಹಾಗು ಗುಂಡು ಮಬ್ಬೆಯರು ತಾವೂ ಕಂಬನಿ ಹರಿಸಿದರು.

ಲಲಿತಾಂಗ ಮುಂದಣ ಭವದಲ್ಲಿ ಮಾನವ ಲೋಕಕ್ಕೆ ಬಂದು ವಜ್ರ ಜಂಘನೆನಿಸಿದನು. ಅತ್ತ ಸ್ವಯಂಪ್ರಭೆ ವಿರಹತಾಪದಲ್ಲೇ ಮರಣವನ್ನಪ್ಪಿ ಮಾನವಳಾಗಿ ಶ್ರೀಮತಿಯೆನಿಸಿದಳು. ಇಲ್ಲೂ ಇವರಿಬ್ಬರೂ ಕೊನೆಗೆ ದಂಪತಿಗಳಾದರು. ಬಹುಕಾಲ ಅನಂಗಸುಖವನ್ನನುಭವಿಸಿದರು. ಒಂದು ದಿನ ಇಬ್ಬರೂ ಅಂತಃಪುರದಲ್ಲಿ ಮಲಗಿದ್ದರು. ಅಂದು ಸುಗಂಧ ದ್ರವ್ಯದ ನರುಗಂಪನ್ನು ಹೆಚ್ಚಾಗೇ ಹೊಗೆ ಹಾಕಿತ್ತು. ಸೇವಕರು ಗವಾಕ್ಷಿಯನ್ನು ಮುಚ್ಚಿದ್ದರು. ಈ ದಂಪತಿಗಳು ಸುತ್ತಲೂ ಇದ್ದ ಕಿಟಕಿಯನ್ನು

ತಾವೇ ಮುಚ್ಚಿಕೊಂಡರು. ಇವರ ಪ್ರಣಯ ಸಮಾಧಿಯನ್ನು ಕೆಣಕಲು ಮಂದಮಾರುತಕ್ಕೂ ಸಂದಿಲ್ಲದಂತಾಯಿತು ! ರಾತ್ರಿಯೆಲ್ಲ ಇವರಿಬ್ಬರೂ ತಬ್ಬಿ ಕೊಂಡು ಲೋಕವನ್ನು ಮರೆತರು. ಬೆಳಗಾಗುವಾಗ ಇವರ ಪ್ರಾಣಪಕ್ಷಿ ಹಾರಿಹೋಗಿತ್ತು ! ಪ್ರಣಯ ಸಮಾಧಿಯ ಸಿದ್ಧಿಯೆಂದರೆ ಹೀಗಿರಬೇಕು–ಎಂದು ಸಂಸಾರ ಸಾರೋದಯನಾದ ಪಂಪ ಚರಮಗೀತೆಯನ್ನು ಹಾಡಿದನು ! ಕೇಳುಗರ ಅಂತಃಕರಣ ಕಲಕಿಹೋಯಿತು.

ಅನಂತರ ಈ ದಂಪತಿಗಳು ಭೋಗ ಭೂಮಿಜರಾದರು! ಅಲ್ಲಿ ಚಾರಣಮುನಿಗಳಿಗೆ ಭಕ್ತಿಯಿಂದ ಸ್ವಾಗತ ನೀಡಿ ಪಾವನರಾದರು. ಮುಂದಣ ಭವಕ್ಕೆ ಭೋಗ ಭೂಮಿಜ. ಶ್ರೀಧರದೇವನಾಗಿ ಅತ್ತ ಭೋಗ ಭೂಮಿಜೆ ಸ್ತ್ರೀಜನ್ಮವನ್ನುಳಿದು ಸ್ವಯಂ ಪ್ರಭನೆಂಬ ದೇವನಾದಳು. ಶ್ರೀಧರ ದೇವ ಮರುಭವದಲ್ಲಿ ಸುವಿಧಿಯಾಗಿ ಹುಟ್ಟಿ ಮಹಾರಾಜನಾದನು. ಸ್ವಯಂಪ್ರಭು ಸತ್ತು ಸುವಿಧಿಯ ಮಗನಾಗಿ ಕೇಶವನೆನಿಸಿದನು– ಹೀಗೆ ಆದಿದೇವನಾಗುವತನಕ ಅವನ ಭವಾವಳಿಯನ್ನು ಸಂಕ್ಷೇಪವಾಗಿ ವಿವರಿಸಿದನು.

ಆದಿದೇವ ರಾಗರಸಿಕ ಈತನ ರಸಿಕತೆಗೆ ಮೆರಗುಕೊಡಲು ಯಶಸ್ವತಿ ಹಾಗು ಸುನಂದೆಯರು ಪ್ರೇಯಸಿಯರಾಗಿ ಬಂದರು. ದಿನ ದಿನಕ್ಕೂ ಆದಿದೇವನ ರಸಿಕತೆ ರಂಗುರಂಗಾಗಿ ಕಂಗೊಳಿಸಿತು ! ಮೂಲೋಕವನ್ನು ಎಚ್ಚರಿಸಬೇಕಾದ ಆದಿತೀರ್ಥಂಕರ ಸಂಸಾರಸಾರೋದಯನಾಗಿ ಮೈಮರೆತನು. ಇವನನ್ನು ಎಚ್ಚರಿಸಲು ದೇವೇಂದ್ರ ನೀಲಾಂಜನಾ ನರ್ತನವನ್ನು ಏರ್ಪಡಿಸಿದನು. ಆ ಮಧುರಾಕಾರ ಲತಾಕೋಮಳೆ ಕಾಮನಬಿಲ್ಲಿನ ಉಯ್ಯಾಲೆಯೇರಿ ಆಡುವಾಗ ಆದಿದೇವನೂ ಮರುಳಾದನು ! ಆದರೆ ಆ ಸುರಗಣಿಕೆಗೆ ನಾಟ್ಯರಂಗದಲ್ಲೇ ಆಯು ತೀರಿತು! ಕಲೆಯಲ್ಲಿ ಧ್ವನಿಯಾಗಿ ಕರಗಿಹೋದಳು ! ರಸಭಂಗವಾಗದಿರಲೆಂದು ದೇವೇಂದ್ರ ಅಂಥದೇ ಪಾತ್ರವನ್ನು ಸೃಷ್ಟಿಸಿ ನಾಟ್ಯವನ್ನು ಮುಂದುವರಿಸಿದನಾದರೂ ಆದಿದೇವನಿಗೆ ಅರಿವಾಯಿತು. ತನ್ನ ಗುರಿಯನ್ನು ಗುರುತಿಸಿದನು. ಜಾತರೂಪ ಧರನಾಗಿ ಆರು ತಿಂಗಳು ತಪವೆಸಗಿದನು. ಚರಿಗೆಗೆ ಹೊರಟು ಆರು ತಿಂಗಳು ಅಲೆದಾಡಿದನು. ಹಿಂದಣ ಭವಗಳಲ್ಲಿ ಸ್ವಯಂಪ್ರಭೆ ಯಾಗಿ ಶ್ರೀಮತಿಯಾಗಿ ಭೋಗಭೂಮಿಜೆಯಾಗಿ ಆದಿದೇವನಿಗೆ ರಸವುಣಿಸಿದ ಆ ದೇವಿ ಈ ಭವದಲ್ಲಿ ಶ್ರೇಯಾಂಸನಾಗಿ

ಬಂದು ಕಾಯುತ್ತಿದ್ದಳು. ಆದಿದೇವ ಚರಿಗೆಗೆ ಎರೆದನು! ಮಹರ್ಷಿ ತಣಿದನು. ಮುಂದೆ ಕೆಲಕಾಲ ತಪವೆಸಗಿ ಕರ್ಮವನ್ನು ಈಡಾಡುವ ರಹಸ್ಯವನ್ನೂ ಬೋಧಿಸಿದನು– ಎಂದು ಪಂಪಕವಿ ದಿವ್ಯಧ್ವನಿಯ ಸಾರವಾದ ಆದಿದೇವ ಚರಿತವನ್ನು ಕಣ್ಣಿಗೆ ಕಟ್ಟುವಂತೆ ಶ್ರಾವಕರ ಮುಂದೆ ಬಣ್ಣಿಸಿದನು. ಈ ವೇಳೆಗಾಗಲೆ ರಾತ್ರಿ ಕಳೆದು ಬೆಳಗಿನ ಜಾವವಾಗಿತ್ತು. ಎಲ್ಲರೂ ಪಂಪನನ್ನು ಕೊಂಡಾಡುತ್ತ ಅವರವರ ಮನೆಗೆ ಹೋದರು. ಅತ್ತಿಮಬ್ಬೆ ಓಡಿ ಬಂದು "ಮಾಮ. ಕಥೆ ತುಂಬ ಚೆನ್ನಾಗಿತ್ತು !" ಎನ್ನುತ್ತ ತನ್ನ ಕೊರಳಲ್ಲಿದ್ದ ಮುತ್ತಿನ ಹಾರವನ್ನು ತೆಗೆದು ಪಂಪನ ಕೊರಳಿಗೆ ಹಾಕಲು ಹೆಣಗಾಡಿದಳು. ಇನ್ನೊಂದು ಕಡೆಯಿಂದ ಗುಂಡುಮಬ್ಬೆ ಬಂದು "ಮಾಮ, ನಮ್ಮನ್ನೆಲ್ಲ ನೀನು ದೇವಲೋಕಕ್ಕೆ ಕರೆದುಕೊಂಡು ಹೋಗಿದ್ದೆ" ಎಂದು ತನ್ನ ಕೈಲಿದ್ಧ ರತ್ನದ ಉಂಗುರವನ್ನು ತೆಗೆದು ಪಂಪನ ಕೈಗಿಡಲು ಪ್ರಯತ್ನಿಸಿದಳು.

"ಮಕ್ಕಳಿರಾ, ನಿಮ್ಮ ಯಾವ ಆಭರಣವೂ ನನಗೆ ಬೇಡ. ಕೊಡುವಂತಿದ್ದರೆ ನನ್ನ ಕೆನ್ನೆಗೆ ಇಬ್ಬರೂ ಒಂದೊಂದು ಮುತ್ತು ಕೊಟ್ಟುಬಿಡಿ" ಎಂದು ಪಂಪಕವಿ ಕೆನ್ನೆಯನ್ನು ಅವರತ್ತ ಚಾಚಿದನು. ಹಸುಳೆಗಳು ಪಂಪನ ಆಸೆಯನ್ನು ತೀರಿಸಿದವು.